## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ವೆಂಕಟ್ ರಾವ್. ವೈ.ಘೋರ್ಪಡೆ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಇವರಿಗೆ ಸಂಭಾವನೆ/ಗೌರವಧನ, ಸಿಬ್ಬಂದಿ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 195 ಜಿಪಸ 2016 ದಿನಾಂಕ: 20-09-2016
2. ಸರ್ಕಾರದ ಆದೇಶ ಸಂಖ್ಯೆ: ಸಾಉಇ 21 ಎಸ್‌ಪಿಯೋ 2015, ಬೆಂಗಳೂರು ದಿನಾಂಕ: 09-09-2015
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 159 ಜಿಪಸ 2017 ದಿನಾಂಕ: 12-07-2017.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ-1993ರ ಪ್ರಕರಣ 310-ಬಿ ರನ್ವಯ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿರುತ್ತದೆ. ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳಾಗಿರುತ್ತಾರೆ. ಸದರಿ ಸಮಿತಿಯ ಉಪಾಧ್ಯಕ್ಷರಲ್ಲೊಬ್ಬರಾಗಿ ಶ್ರೀ ವೆಂಕಟರಾವ್ ವೈ. ಘೋರ್ಪಡೆಯವರನ್ನು ನೇಮಕ ಮಾಡಿ ಆದೇಶಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಿಗೆ ಗೌರವಧನ/ಸಂಭಾವನೆ, ಸಿಬ್ಬಂದಿ ಹಾಗೂ ಇತರೆ ಸೌಲಭ್ಯಗಳನ್ನು ಮೇಲೆ ಓದಲಾದ, (2) ರ ಸರ್ಕಾರದ ಆದೇಶದನ್ವಯ ಈ ಕೆಳಗಿನ ಕೋಷ್ಟಕದಂತೆ ನೀಡಲು ಸರ್ಕಾರವು ನಿರ್ಧರಿಸಿದೆ.

ಕೋಷ್ಟಕ

| ಕ್ರ.ಸಂ. | ವಿಷಯ | ಹುದ್ದೆ | ವೆಚ್ಚಗಳ ವಿವರ |
|---|---|---|---|
| 1 | ಸಂಭಾವನೆ/ಗೌರವಧನ (ಪ್ರತಿ ತಿಂಗಳು) | ಉಪಾಧ್ಯಕ್ಷರು | 30,000/- |
| 2' | ಮನೆ ಬಾಡಿಗೆ ಭತ್ಯೆ | ಉಪಾಧ್ಯಕ್ಷರು | 20,000/- ಬೆಂಗಳೂರು ನಗರದಲ್ಲಿ.<br>ರೂ.10,000/- ಇತರೆ ಪ್ರದೇಶದಲ್ಲಿ |
| 3. | ಪೀಠೋಪಕರಣ (ಒಂದು ಬಾರಿಗೆ ಮಾತ್ರ) | ಉಪಾಧ್ಯಕ್ಷರು | 20,000 |
| 4. | ಆಪ್ತ ಶಾಖೆಯ ಸಿಬ್ಬಂದಿಗಳು | ಆಪ್ತ ಕಾರ್ಯದರ್ಶಿ – ಒಂದು ಹುದ್ದೆ<br>ಆಪ್ತ ಸಹಾಯಕ – ಒಂದು ಹುದ್ದೆ<br>ದಲಾಯತ್ – ಒಂದು ಹುದ್ದೆ<br>ವಾಹನ ಚಾಲಕ – ಒಂದು ಹುದ್ದೆ (ಅಗತ್ಯವಿದ್ದಲ್ಲಿ) | |
| 5 | ವಾಹನ ಸವಲತ್ತು | ಬಾಡಿಗೆ ಆಧಾರದ ಮೇಲೆ | |
| 6 | ದೂರವಾಣಿ ಸೌಲಭ್ಯ | ಆಯಾ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅನ್ವಯವಾಗುವ ಗೃಹಬಳಕೆ ದೂರವಾಣಿ ಮತ್ತು ಮೊಬೈಲ್ ಫೋನ್ ವೆಚ್ಚಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. | |
| 7 | ಪ್ರವಾಸ ಭತ್ಯೆ | ಸಾಮಾನ್ಯ ಕಂಪನಿ ನಿಯಮದ ಮೇಲೆ ಅಥವಾ ಎಲ್ಲಿ ಸಾಮಾನ್ಯ ಕಂಪನಿ ನಿಯಮ ಅನ್ವಯಿಸುವುದಿಲ್ಲವೋ ಅಲ್ಲಿ ಕಂಪನಿಯ ಮಂಡಳಿಯ ನಿರ್ದಿಷ್ಟ ತೀರ್ಮಾನದ ಮೇರೆಗೆ | |

2017-18ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ **"ನಮ್ಮ ಗ್ರಾಮ ನಮ್ಮ ಯೋಜನೆಗೆ"** ರೂ.20.00 ಕೋಟಿಯನ್ನು ಒದಗಿಸಲಾಗಿರುತ್ತದೆ. ಸದರಿ 20.00 ಕೋಟಿಗಳಲ್ಲಿ ಮೇಲೆ ಓದಲಾದ (3) ರ ಆದೇಶದಲ್ಲಿ ರಾಜ್ಯ ಮಟ್ಟದ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಸದೃಢಗೊಳಿಸಲು ರೂ.5.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಹಾಗೂ ಸಚಿವ ಸಂಪುಟವು ಸಹ ದಿನಾಂಕ: 05-07-2017 ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ.

ಮಾನ್ಯ ಉಪಾಧ್ಯಕ್ಷರ ಗೌರವಧನ/ಸಂಭಾವನೆ, ಸಿಬ್ಬಂದಿ ಮತ್ತು ವಿಶೇಷ ಸೌಲಭ್ಯಗಳನ್ನು ನಮ್ಮ ಗ್ರಾಮ ನಮ್ಮ ಯೋಜನೆಯ ಲೆಕ್ಕಶೀರ್ಷಿಕೆಯಾದ 2215-01-102-9-09 ರಿಂದ ಭರಿಸಬಹುದಾಗಿದೆ.

ರಾಜ್ಯ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಿಗೆ ಈ ಮೇಲೆ ತಿಳಿಸಿದ ಸೌಲಭ್ಯಗಳನ್ನು ಸದರಿಯವರು ಅಧಿಕಾರ ಸ್ವೀಕರಿಸಿದ ದಿನಾಂಕದಿಂದಲೇ ಜಾರಿಗೆ ಬರುವಂತೆ ನೀಡಲು ಸರ್ಕಾರವು ನಿರ್ಣಯಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 122 ಜಿಪಸ 2017, ಬೆಂಗಳೂರು, ದಿನಾಂಕ: 17-01-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವೆಂಕಟ್ ರಾವ್. ವೈ.ಘೋರ್ಪಡೆ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಇವರಿಗೆ ಪ್ರಸ್ತಾವನೆಯ ಕೋಷ್ಟಕದಲ್ಲಿ ವಿವರಿಸಿರುವಂತೆ ಸಂಭಾವನೆ/ಗೌರವಧನ, ಸಿಬ್ಬಂದಿ ಹಾಗೂ ಇತರೆ ಸೌಲಭ್ಯಗಳನ್ನು ಅಧಿಕಾರ ಸ್ವೀಕರಿಸಿದ ದಿನಾಂಕದಿಂದಲೇ ಜಾರಿಗೆ ಬರುವಂತೆ ನೀಡಲು ಆದೇಶಿಸಲಾಗಿದೆ ಹಾಗೂ ಸದರಿ ವೆಚ್ಚವನ್ನು, ನಮ್ಮ ಗ್ರಾಮ ನಮ್ಮ ಯೋಜನೆಯ ಲೆಕ್ಕಶೀರ್ಷಿಕೆಯಾದ 2215-01-102-9-09 ರಿಂದ ಭರಿಸಲು ಆದೇಶಿಸಲಾಗಿದೆ.

ಈ ಆದೇಶವು, ಉಪಾಧ್ಯಕ್ಷರು ಅಧಿಕಾರವನ್ನು ಸ್ವೀಕರಿಸಿದ ದಿನಾಂಕದಿಂದ ಸದರಿಯವರ ಪದಾವಧಿಯ 5 ವರ್ಷಗಳಿಗೆ ಅಥವಾ ತಮ್ಮ ಪದಾವಧಿ ಮುಕ್ತಾಯದವರೆಗೆ, ಅವೆರಡರಲ್ಲಿ ಯಾವುದೂ ಮೊದಲೊ ಅಲ್ಲಿಯವರೆಗೆ ಜಾರಿಯಲ್ಲಿರತಕ್ಕದ್ದು,

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ/305/ವೆಚ್ಚ-6/2017 ದಿನಾಂಕ: 18-12-2017 ರಲ್ಲಿ ನೀಡಿರುವ ಆರ್ಥಿಕ ಇಲಾಖೆಯ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

PDevasahayam 17/1/2018

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
3. ಖಜನಾಧಿಕಾರಿ, ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
4. ಯೋಜನಾ ನಿರ್ದೇಶಕರು,(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಬೆಂಗಳೂರು
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಸಂಗ್ರಹಣಾಧಿಕಾರಿ, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ವ್ಯವಸ್ಥಾಪಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ-ಇವರಿಗೆ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
8. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

ಪ್ರತಿಯನ್ನು:

1. ಶ್ರೀ ವೆಂಕಟ್ ರಾವ್. ವೈ.ಘೋರ್ಪಡೆ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಮಾಹಿತಿಗಾಗಿ.
3. ನಿರ್ದೇಶಕರು, (ಪಂ.ರಾಜ್-2) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.